(ದಿಃ 27.06.2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು )

**ಮುಂದುವರಿದ ಪಾಟೀ ಸವಾಲು : ಎದುರುದಾರರ ಪರ ಶ್ರೀ ಆರ್ ಎಸ್ ಬಿ ವಕೀಲರಿಂದ :**

11. ಈಗ ತೋರಿಸಲಾದ ಸಹಿ ನನ್ನದಲ್ಲ. (ಎದುರುದಾರ ಯಾದಿ ದಿನಾಂಕಃ 07.03.2018 ರ ಅಡಿಯದಲ್ಲಿ ಹಾಜರು ಮಾಡಿದ ದಾಖಲೆಗಳನ್ನು ದಿನಾಂಕಃ 13.03.2018 ರಂದು ಎಂ ಡಬ್ಲ್ಯೂ 1 ರ ಸಾಕ್ಷಿ ಕಾಲಕ್ಕೆ ನಿ ಎಂ 1 ರಿಂದ 39 ಎಂದು ಗುರುತಿಸಲಾಗಿದ್ದು, ದಾಖಲೆಗಳನ್ನು ಗುರುತಿಸುವ ಸಮಯದಲ್ಲಿ ಕ್ರಮ ಸಂಖ್ಯೆ ಸರಿಯಾಗಿ ನಮೂದಿಸದೆ ಇರುವುದರಿಂದ ದಿನಾಂಕಃ 24.06.2019 ರಂದು ಸಾಕ್ಷಿಗೆ ತೋರಿಸಲಾದ ಅಂಚೆ ಸ್ವಿಕೃತಿ ಪತ್ರಕ್ಕೆ ಗುರುತಿನ ಸಂಖ್ಯೆ ನಮೂದಾಗಿರುವುದಿಲ್ಲ. ಎದುರುದಾರರ ಯಾದಿ ದಿನಾಂಕಃ 07.03.2018 ರ ಅಡಿಯದಲ್ಲಿ ಹಾಜರು ಮಾಡಿದ ದಾಖಲೆಗಳ ಕ್ರಮ ಸಂಖ್ಯೆ 7 ನ್ನು ಈಗ ನಿ ಎಂ 7 ಎಂದು ಗುರುತಿನ ಸಂಖ್ಯೆ ನೀಡಿ, ಸಾಕ್ಷಿಯು ತನ್ನದಲ್ಲವೆಂದು ಹೇಳಲಾದ ಸಹಿಯನ್ನು ನಿ ಎಂ 7 ಎ ಎಂದು ಗುರುತಿಸಲಾಯಿತು.)

12. ನಿ ಎಂ 7 ಎ ನಾನೇ ಮಾಡಿದ ಸಹಿ ಇದ್ದಾಗ್ಯೂ ಸುಳ್ಳು ಸಾಕ್ಷಿ ನೀಡುತ್ತಿದ್ದೇನೆ ಅನ್ನುವುದು ಸುಳ್ಳು. ಈಗ ತೋರಿಸಿದ ನಿ ಎಂ 8 ರ ಮೇಲೆ ಇರುವ ಸಹಿ ನನ್ನದೆ ಇದ್ದು ಅದನ್ನು ನಿ ಎಂ 8 ಎ ಎಂದು ಗುರುತಿಸಲಾಯಿತು. ನಿ ಎಂ 8 ನ್ನು ಪಡೆದ ನಂತರವು ನಾನು ಕೆಲಸಕ್ಕೆ ಹಾಜರಾಗಿಲ್ಲ ಅನ್ನುವುದು ಸುಳ್ಳು. ನನಗೆ ಅಪಾದನೆ ಪತ್ರದ ಪ್ರತಿ ನೀಡಲಾಯಿತು ಎನ್ನುವುದು ಸುಳ್ಳು. ಈಗ ತೋರಿಸಿದ ನಿ ಎಂ 9 ರ ಮೇಲೆ ಇರುವ ಸಹಿ ನನದೆ ಇದ್ದು ಅದನ್ನು ನಿ ಎಂ 9 ಎ ಎಂದು ಗುರುತಿಸಲಾಯಿತು. ನಿ ಎಂ 9 ಕ್ಕೆ ನಾನು ಉತ್ತರ ನೀಡಿಲ್ಲ ಎನ್ನುವುದು ನೆನಪಿಲ್ಲ. ನಾನು ಕೆಲವು ದಿನಾಂಕಗಳಂದು ವಿಚಾರಣೆಗೆ ಹಾಜರಾಗಿದ್ದೇನೆ.

13. ನಾನು ಮಾನಸಿಕವಾಗಿ ಬಳಲುತ್ತಿದ್ದೆ. ಕರಾವಾರದ ಜಿಲ್ಲಾ ಅಸ್ಪತ್ರೆಯ ಶಸ್ತ್ರ ಚಿಕಿತ್ಸಕರಿಂದ ಚಿಕೆತ್ಸೆ ಪಡೆದಿದ್ದೇನೆ. ನಾನು ಡಾಃ ಮೋಹನ ಬಾಬು ಎನ್ನುವ ಮಾನಸಿಕ ತಜ್ಞರಿಂದ ಚಿಕಿತ್ಸೆ ಪಡೆದಿದ್ದೇನೆ. ಡಬ್ಲ್ಯೂ 1 ರ ಪ್ರಕಾರ ನಾನು ದಿನಾಂಕಃ 07.03.2017 ರಂದು ಚಿಕಿತ್ಸೆಗಾಗಿ ಹೋಗಿದ್ದು ಕಂಡು ಬರುತ್ತದೆ. ನಾನು ಸಂಪೂರ್ಣ ವಿಶ್ರಾಂತಿ ಪಡೆದು ಚಿಕಿತ್ಸೆ ಪಡೆಯುವ ರೋಗದಿಂದ ಬಳಲುತ್ತಿರಲಿಲ್ಲ ಅನ್ನುವುದು ನಿಜ. ನಾನು ಅಥವಾ ನನ್ನ ಹೆಂಡತಿ ರಜೆ ಅರ್ಜಿ ಸಲ್ಲಿಸಿಲ್ಲ ಅನ್ನುವುದು ಸುಳ್ಳು. ನಾವು ಸಲ್ಲಿಸಿದ ರಜೆ ಅರ್ಜಿ ಮತ್ತು

ದಾಖಲೆಗಳ ಕುರಿತು ಹಿಂಬರಹ ಇಲ್ಲ.

14. ನಿ ಡಬ್ಲೂ 2 ಮತ್ತು 3 ನ್ನು ನನ್ನ ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿ ತಂದಿದ್ದೇನೆ ಅನ್ನುವುದು ಸುಳ್ಳು. ನಿ ಡಬ್ಲೂ 1 ನ್ನು ಸಹ ನನ್ನ ಪ್ರಕರಣಕ್ಕೆ ಅನುಕೂಲವಾಗುವಂತೆ ಏಕ ಕಾಲಕ್ಕೆ ಸೃಷ್ಟಿಸಲಾಗಿದೆ ಅನ್ನುವುದು ಸುಳ್ಳು. ಚಾಲಕ ಮತ್ತು ನಿರ್ವಾಹಕರು ಅನಧಿಕೃತ ಗೈರು ಹಾಜರಾದರೆ ಸಂಸ್ಥೆಗೆ ಹಾನಿ ಹಾಗೂ ಪ್ರಯಾಣಿಕರಿಗೆ ತೊಂದರೆ ಅಗುತ್ತದೆ ಅನ್ನುವುದು ನಿಜ.

15. ಈ ಮುಂಚೆಯು ನನ್ನನ್ನು ಕೆಲಸದಿಂದ ವಜಾ ಮಾಡಲಾಗಿತ್ತು ಅನ್ನುವುದು ನಿಜ. ಸಾಕಷ್ಟು ಬಾರಿ ಲಘು ಶಿಕ್ಷೆ ವಿಧಿಸಲಾಗಿತ್ತು ಅನ್ನುವುದು ಸುಳ್ಳು. ವಜಾ ಆದೇಶದೊಂದಿಗೆ ಒಂದು ತಿಂಗಳ ಸಂಬಳದ ಚೆಕ್ಕು ಸಹ ನನಗೆ ಕಳುಹಿಸಲಾಗಿತ್ತು ಅನ್ನುವುದು ನಿಜ. ನಾನು ಬೇರೆ ಕಡೆ ಕೆಲಸ ಮಾಡಿಕೊಂಡಿದ್ದೇನೆ ಅನ್ನುವುದು ಸುಳ್ಳು. ಕೇಳಲಾದ ಪರಿಹಾರಕ್ಕೆ ನಾನು ಅರ್ಹನಲ್ಲ ಅನ್ನುವುದು ಸುಳ್ಳು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿಯಿದೆ

ಅಧ್ಯಕ್ಷಾಧಿಕಾರಿಗಳು
ಕಾರ್ಮಿಕ ನ್ಯಾಯಾಲಯ ಹುಬ್ಬಳ್ಳಿ